Leave of Absence to the Members.

Mr. SPEAKER.—I have received a letter from Sri M. Y. Ghorpade, a member of this House, requesting leave of absence from attending the sittings of the Assembly from the 23rd June 1964 for the rest of the sittings in view of his visit to new Delhi, in connection with Planning Commission's Advisory Committee and Consultative Council on Panchayati Raj.

Is it the pleasure of the House that permission be granted to Sri M. Y. Ghorpade, for being absent from attending the rest of the sittings of the Assembly ?

HON'BLE MEMBERS.—Yes.

Mr. SPEAKER.—Permission to remain absent is granted to the member. I have received another letter from Sri P. B. Bommanna, a member of this House, requesting leave of absence from attending the sittings of the Assembly from the 25th June, 1964 for the rest of the sittings due to his ill-health.

Is it the pleasure of the House that permission be granted to Sri P. B. Bommanna, for being absent from attending the rest of the sittings of the Assembly ?

HON'BLE MEMBERS.—Yes.

Mr. SPEAKER.—Permission to remain absent is granted to the member.

Members' Representations

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ನಾನು ಶರಾವತಿ ಶ್ವೇತಪತ್ರದ ಮೇಲೆ ಚರ್ಚೆಗೆ ಅವಕಾಶಮಾಡಿಕೊಡಬೇಕು ಎಂದು ಹೇಳಿದ್ದೆ. ಆ ವಿಚಾರದಲ್ಲಿ ತಾವು ಏನು ತೀರ್ಮಾನ ಮಾಡಿದ್ದೀರೋ ಎಂಬುದು ನನಗೆ ಗೊತ್ತಾಗಲಿಲ್ಲ. ಇನ್ನೊಂದು ವಿಷಯ. ಕೊಂಡಜ್ಜಿ ಬಸಪ್ಪನವರ ವರದಿಯನ್ನು ಇಲ್ಲಿ ಚರ್ಚೆಮಾಡಿ ಆ ಒಂದು ಚರ್ಚೆಯ ಬೆಳಕಿನಲ್ಲಿ ಈ ಗ್ರಾಮ ಪಂಚಾಯಿತಿ ರಾಜ್ಯ ಮಸೂದೆಯನ್ನು ರೂಪಿಸಬೇಕೆಂಬ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆವು, ಅದರ ಜೊತೆಗೆ ಶ್ರೀಮಾನ್ ಘೋರ್ಪಡೆಯವರು ಒಂದು ನೋಟನ್ನು ಬೇರೆ ಕೊಟ್ಟರು. ತಾವು ಮೊನ್ನೆ ತಾನೇ ಈ ಎರಡು ವಿಚಾರಗಳ ಮೇಲೆ ಚರ್ಚೆ ನಡೆಯಬೇಕೆಂದು ಅಪ್ಪಣೆ ಕೊಡಿಸಿದ್ದಿರಿ. ಈಗ ಸಲಹಾ ಸಮಿತಿಯ ತೀರ್ಮಾನದ ಪ್ರಕಾರ ಮಸೂದೆಯ ಚರ್ಚೆಗೆ ಹದಿಮೂರುವರೆ ಘಂಟೆಗಳ ಕಾಲಾವಕಾಶ ಕೊಟ್ಟಿದ್ದೀರಿ. ಇದು ಏಕೆ ಹೀಗಾಯಿತೋ ಗೊತ್ತಾಗಲಿಲ್ಲ. ಅಥವಾ ಕೊಂಡಜ್ಜಿ ಬಸಪ್ಪನವರ ಸಮಿತಿ ವರದಿ ಉಪಯುಕ್ತವಲ್ಲವೆಂದು ಸರ್ಕಾರದವರು ಈ ರೀತಿ ಮಾಡಿದ್ದಾರೋ ಅಥವಾ ಅದನ್ನು ಚರ್ಚಿಸುವುದರಿಂದ ಏನಾದರೂ ತೊಂದರೆ ಬರುತ್ತದೋ ಎಂದು ನಿಧಾನಮಾಡಿದ್ದಾರೋ ನನಗೆ ಗೊತ್ತಾಗಲಿಲ್ಲ.

1-00 P.M.

ಶರಾವತಿಯ ಶ್ವೇತಪತ್ರದ ಬಗ್ಗೆ ಈ ಅಧಿವೇಶನದಲ್ಲಿ ಚರ್ಚೆ ಆಗದೇ ಹೋದರೆ ಮುಂಚೆ ಚರ್ಚೆಯಾಗಿ ಏನೂ ಪ್ರಯೋಜನವಿಲ್ಲ ಎಂದು ಅನಿಸುತ್ತದೆ. ಆ ವಿಷಯವನ್ನು ಚರ್ಚೆ ಮಾಡಲು ಈಗಾಗಲೇ ಕಾಲವಿಳಂಬವಾಗಿದೆ. ಇಂಥ ವಿಷಯಗಳನ್ನು ಚರ್ಚೆ ಮಾಡುವುದರಲ್ಲಿ ವಿಳಂಬ ಮಾಡುವುದು ಸರಿಯಲ್ಲ. ಆ ರೀತಿ ವಿಳಂಬ ಮಾಡುವುದಾದರೆ ಮುಂದೆ ಇನ್ನಷ್ಟು ಆಕ್ಷೇಪಗಳಿಗೆ ಎಡೆ ಕೊಡಬಹುದು. ಆದ್ದರಿಂದ ಈ ಅಧಿವೇಶನದಲ್ಲೇ ಶರಾವತಿಯ ಶ್ವೇತಪತ್ರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಬಹಳ ಸಲ ನಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುವುದನ್ನು ನಾನು ನೋಡುತ್ತಿದ್ದೇನೆ. ಲೆಜಿಸ್ಲೇಚರ್ ಇಲಾಖೆಯವರು ಯಾರ ಪ್ರಶ್ನೆ ಬಂದಿದೆ ಎನ್ನುವುದನ್ನು ಒಂದು ದಿವಸ ಮುಂಚಿತವಾಗಿ ತಿಳಿಸುವುದಿಲ್ಲ. ಪ್ರಶ್ನೆಗಳನ್ನು ಸುಮ್ಮನೆ ಪಿಜನ್ ಹೋಲ್‌ನಲ್ಲಿ ಹಾಕುವಂತಹ ಒಂದು ಪದ್ಧತಿ ಬಂದಿದೆ. ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಇಂತಿಥವರ ಪ್ರಶ್ನೆ ನಾಳೆ ಸಭೆಯಲ್ಲಿ ಬರುತ್ತದೆ. ಎಂದು ಒಂದು ದಿವಸ ಮುಂಚಿತವಾಗಿ ಮಾನ್ಯ ಸದಸ್ಯರಿಗೆ ತಿಳಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು.

ಇನ್ನು 1962-63ನೆಯ ಸಾಲಿನಲ್ಲಿ ನಾನು ಎಷ್ಟೋ ಪ್ರಶ್ನೆಗಳನ್ನು ಕಳುಹಿಸಿದ್ದೆ. ಆ ಪ್ರಶ್ನೆಗಳಿಗೆ ಇಷ್ಟು ದಿವಸಗಳವರೆಗೂ ಉತ್ತರ ಬಂದಿಲ್ಲ. ನಾವು ಕಳುಹಿಸಿದಂತಹ ಪ್ರಶ್ನೆಗಳು ಇಲ್ಲಿ ಬರಬೇಕಾದರೆ ಬೇರೆ ಯಾವುದಾದರೂ ಒಂದು ಕ್ರಮವನ್ನು ಅನುಸರಿಸಬೇಕೇ ಹೇಗೆ, ಅಥವಾ ಮಾಮೂಲು ಪದ್ಧತಿ ಏನಾದರೂ ಇದೆಯೇ ? ತಾವು ಪ್ರಶ್ನೆಗಳನ್ನ ಅಂಗೀಕಾರ ಮಾಡಿದ ಮೇಲೆ 15 ದಿವಸಗಳೊಳಗಾಗಿ ಸಂಬಂಧಪಟ್ಟ ಸದಸ್ಯರುಗಳಿಗೆ ನೋಟೀಸ್ ಕೊಡಬೇಕು. ನಾನು ತಮಗೆ ಕಳುಹಿಸಿರುವಂತಹ ಪ್ರಶ್ನೆಗಳನ್ನು ಈ ಸಭೆಯ ಮುಂದೆ ಇಡಬೇಕು. ನಾಳೆ ಜನಗಳು ಶ್ರೀಮಾನ್ ಗೋಪಾಲ ಗೌಡರು ಪ್ರಶ್ನೆಗಳನ್ನು ಕಳುಹಿಸಲಿಲ್ಲವೋ ಏನೋ ಎಂದು ತಿಳಿದುಕೊಳ್ಳುತ್ತಾರೆ.

Mr. SPEAKER.—The Hon'ble Member has raised three points. I do not know why he has done so because that is not the way of raising points for consideration. If there is anything he wants to bring it to my notice he must write to me first, so that I may know it before-hand, before I allow the same to be raised on the Floor of this House.

With regard to the lapsing of his Questions, I would ask him to give me particulars of such Questions even now. I have got all those Questions selected, though they were given notice of by members in 1963 and have addressed the concerned Hon'ble Ministers. They have been requested to inform me why they have not been able to furnish replies to such questions as yet. I would like Sri Gopala Gowda to let me know which are the Questions left over. If he has no patience to write to me giving me these particularly, he cannot expect any assistance from me.

ಶ್ರೀ ಎಸ್. ಗೋಪಾಲ ಗೌಡ.—ಈ ಸಂಬಂಧದಲ್ಲಿ ಮಾರ್ಚ್ ತಿಂಗಳಿನಲ್ಲಿ ಈ ಸಭೆ ನಡೆಯುತ್ತಿದ್ದಾಗ ತಮಗೆ ಒಂದು ಕಾಗದವನ್ನು ನಾನು ಬರೆದಿದ್ದೇನೆ.

Mr. SPEAKER.—He should tell me the position as obtaining to-day. He should also inform me which are the Questions pending and when they were sent here. I will have the same examined and deal with it. I request him not to raise such points without telling me in advance. The moment the Question Hour is over, he is in the habit of rising to raise some points. I allowed it for sometime, I am not going to allow it hereafter.

ಶ್ರೀ ಎಸ್. ಗೋಪಾಲ ಗೌಡ.—ಬಿಜಿನೆಸ್ ಅಡ್ವೈಸರಿ ಕಮಿಟಿಯ ರಿಪೋರ್ಟ್‌ನ್ನು ಇಟ್ಟಾಗ ನಾನು ಹೇಳಿದ್ದೇನೆ.

Mr. SPEAKER.—Why not meet me in my chambers and discuss all this with me ?

ಶ್ರೀ ಎಸ್. ಗೋಪಾಲ ಗೌಡ.—ತಾವು ನನ್ನನ್ನು ತಮ್ಮ ಮನೆಗೇ ಬಂದು ಹೇಳು ಎಂದರೆ ಹೇಳುತ್ತೇನೆ. ನನ್ನ ಕೆಲಸವನ್ನೆಲ್ಲಾ ಬಿಟ್ಟು ಬೇಕಾದರೆ ತಮ್ಮ ಜೊತೆಯಲ್ಲಿಯೇ ಇದ್ದುಬಿಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಇತರ ಕೆಲಸವನ್ನು ಬಿಟ್ಟು ನನ್ನ ಹತ್ತಿರ ಬರುವುದು ಬೇಡ. ಅವರು ತಮ್ಮ ಕೆಲಸಕ್ಕಾಗಿಯೇ ನನ್ನ ಹತ್ತಿರ ಬಂದರೆ ಬಹಳ ಸಂತೋಷ.

So far as his other point relating to discussion of the white paper on the Sharavathi Project is concerned, I think, we dealt with it yesterday and all that we have to decide is whether we could sit after the 11th to take up this matter. It depends upon the willingness of the House.

ಶ್ರೀ ಎಸ್. ಗೋಪಾಲ ಗೌಡ.–ಸ್ವಾಮಿ, ನಾನು ತಮ್ಮಲ್ಲಿ ಹೇಳಿದಂತಹ ವಿಷಯಗಳಿಗೆ ಪೂರ್ತಿಯಾಗಿ ಉತ್ತರ ಬರಲಿಲ್ಲ.

Mr. SPEAKER.—Sri Gopala Gowda should know that he has no right to refer to things that are not included in the List of Business. I will not deal with extraneous matters.

With regard to the discussion on Sri Kondajji Basappa's Report and the note circulated by Sri M. Y. Ghorpade, I do not find any difficulty at all. Why should there be a separate discussion ? The report has been supplied as well as the Bill and the Bill will come up for consideration here. If members think that it is too early, we will take it up tomorrow. I do not think there has been any inconvenience caused to anybody to make a detailed study of the report submitted by Sri Kondajji Basappa or of the book circulated by Sri M. Y. Ghorpade. The introduction of the Bill will be done tomorrow and not to-day. Let the Members read it. I want to know how it has not been possible for members to study both the Report and the book. Why should there be a separate opportunity for debate ? Whatever has been accepted by the Government has been included in the Bill and all that is going to be considered and we will deal with it. The report will facilitate the Debate on the Bill and the Government said that they could introduce a measure on the basis of the report. Therefore, I am unable to understand why they should have separate opportunity to discuss the Report.

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿ ಅವರು ವರದಿಯನ್ನು ಕೊಟ್ಟಮೇಲೆ ಅದು ಈ ಸಭೆಯ ಮುಂದೆ ಬರಬೇಕು. ಚರ್ಚೆ ಆಗಬೇಕು. ಅನಂತರ ಅದರ ಕಾನೂನು ರಚನೆ ಮಾಡುವುದು ಒಳ್ಳೆಯದು.

Mr. SPEAKER.—That is not the only way.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ ಒಂದು ಪ್ರಶ್ನೆ. ಈ ಸಭೆಯಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿದ ನಂತರ ನಾನು ಊರಿಗೆ ಹೋದಾಗ ತುಮಕೂರು ಜಿಲ್ಲೆಯಲ್ಲಿ ಜನಗಳಿಗೆ ಆಹಾರ ಇಲ್ಲದೆ ಅವರು ಈಗ ನನ್ನ ಕೈಯ್ಯಲ್ಲಿ ಇರುವಂತಹ ಗೆಡ್ಡೆ ಗೆಣಸು ತಿನ್ನುತ್ತಿದ್ದಾರೆ. ಇಷ್ಟಾದರೂ ತುಮಕೂರು ಜಿಲ್ಲೆಯನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಿಲ್ಲ.

Mr. SPEAKER.—It should not have entered the House at all. However, he may send that bag here. It is a very serious matter.

ಶ್ರೀ ಕೆ. ಲಕ್ಕಪ್ಪ.—ಹೊಟ್ಟೆಗೆ ಆಹಾರವಿಲ್ಲದೆ ಜನಗಳು ಇಂಥ ಗೆಡ್ಡೆಗಳನ್ನು ತಿನ್ನುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಗಿಂತಲೂ ಉಲ್ಬಣ ಸ್ಥಿತಿ ತುಮಕೂರು ಜಿಲ್ಲೆಯಲ್ಲಿ ಬಂದಿದೆ.

Mr. SPEAKER.—The Hon'ble Member did not tell me before hand that he was going to raise it. He has achieved his purpose by mentioning it to the House, so that the Hon'ble Minister may take note of it and it can have all the publicity. He must observe some procedure. He must tell me beforehand. He would seem to be disliking me. Let him not cultivate that habit.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಇವೇ ನೋಡಿ ಆ ಗೆಡ್ಡೆಗಳು. ಈ ಗೆಡ್ಡೆಗಳಿಗೆ ಸೀಬೆಗೆಡ್ಡೆ ಎಂದು ಹೇಳುತ್ತಾರೆ (ಆ ಗೆಡ್ಡೆಗಳನ್ನು ಹಾಕಿರತಕ್ಕ ಒಂದು ಲಕೋಟೆಯಿಂದ ಕೆಲವು ಗೆಡ್ಡೆಗಳನ್ನು ತೆಗೆದು ಅಧ್ಯಕ್ಷರಿಗೆ ಕಳುಹಿಸಿದರು.)

Mr. SPEAKER.—He has said that and I permitted him to do that.

———